# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ : 238 (302)
2. ಸದಸ್ಯರ ಹೆಸರು : ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 09.12.2025
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕಲಬುರಗಿ ಜಿಲ್ಲೆಯಲ್ಲಿರುವ ವಿಮಾನ ನಿಲ್ದಾಣ ಪ್ರಾರಂಭವಾಗಿದ್ದು ಯಾವಾಗ; ಆರಂಭಿಕವಾಗಿ ಈ ನಿಲ್ದಾಣಕ್ಕೆ ಸಾರ್ವಜನಿಕ ವಿಮಾನ ಸಂಪರ್ಕ ಕಲ್ಪಿಸಲು ಯಾವ ಯಾವ ಕಂಪನಿಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ.</td><td>ರಾಜ್ಯ ಸರ್ಕಾರವು ದಿನಾಂಕ:24.08.2019ರಂದು ಮಾಡಿಕೊಂಡಿರುವ ಒಪ್ಪಂದದಂತೆ ಕಲಬುರಗಿ ವಿಮಾನ ನಿಲ್ದಾಣವನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ(AAI)ಕ್ಕೆ ಹಸ್ತಾಂತರಿಸಿದೆ. ಈ ವಿಮಾನ ನಿಲ್ದಾಣವು ದಿನಾಂಕ:22.11.2019 ರಿಂದ ಕಾರ್ಯಾಚರಣೆಗೊಂಡಿರುತ್ತದೆ.<br><br>ರಾಜ್ಯ ಸರ್ಕಾರವು ಸಾರ್ವಜನಿಕ ವಿಮಾನಯಾನ ಸಂಪರ್ಕ ಕಲ್ಪಿಸಲು ಯಾವುದೇ ವಿಮಾನಯಾನ ನಿರ್ವಾಹಕ ಸಂಸ್ಥೆಯೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡಿರುವುದಿಲ್ಲ.<br><br>ಕಲಬುರಗಿ ವಿಮಾನ ನಿಲ್ದಾಣವು ಕೇಂದ್ರ ಸರ್ಕಾರದ ಪ್ರಾದೇಶಿಕ ಸಂಪರ್ಕ ಯೋಜನೆಯ 3ನೇ ಸುತ್ತಿನ ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಆಯ್ಕೆಯಾಗಿರುತ್ತದೆ. ಅದರಂತೆ, ವಿಮಾನಯಾನ ಕಾರ್ಯನಿರ್ವಾಹಕ ಸಂಸ್ಥೆಗಳು ಕೇಂದ್ರ ಸರ್ಕಾರದ AAI ಸಂಸ್ಥೆಯೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡಿರುತ್ತವೆ.</td></tr>
<tr><td>(ಆ)</td><td>ಒಡಂಬಡಿಕೆ ಮಾಡಿಕೊಂಡ ಕಂಪನಿಗಳು ತಲಾ ಎಷ್ಟು ವರ್ಷಗಳ ಕಾಲ ವಾಯಿದೆಗೆ ಒಪ್ಪಿಕೊಂಡಿವೆ; ವಾಯಿದೆಯ ಪ್ರಕಾರ ಕಂಪನಿಗಳು ಸರಿಯಾಗಿ ವಿಮಾನ ಸೇವೆಯನ್ನು ಒದಗಿಸಿವೆಯೇ;</td><td>ವಿಮಾನಯಾನ ಕಾರ್ಯನಿರ್ವಾಹಕ ಸಂಸ್ಥೆಗಳು ಕೇಂದ್ರ ಸರ್ಕಾರದ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ(AAI) ಸಂಸ್ಥೆಯೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯಂತೆ ಕನಿಷ್ಠ 3 ವರ್ಷಗಳ ಕಾಲ ವಿಮಾನಯಾನ ಸೇವೆಯನ್ನು ಒದಗಿಸಬೇಕಾಗಿರುತ್ತದೆ.<br><br>ಈ ಸಂಬಂಧ 3ನೇ ಸುತ್ತಿನ ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಆಯ್ಕೆಯಾದ ಸಂಸ್ಥೆಗಳ ವಿವರಗಳನ್ನು ಕೆಳಕಂಡ ತಃಖ್ತೆಯಲ್ಲಿ ವಿವರಿಸಿದೆ;<br><br><table><tr><th>ಕ್ರ ಸಂ</th><th>RCS ಮಾರ್ಗ</th><th>ವಿಮಾನಯಾನ ನಿರ್ವಾಹಕಸಂಸ್ಥೆಗಳು</th></tr><tr><td>1</td><td>Bangalore - Kalaburgi - Bangalore</td><td>Ghodawat</td></tr><tr><td>2</td><td>Bangalore - Kalaburgi - Bangalore</td><td>Alliance Air</td></tr><tr><td>3</td><td>Hindan - Kalaburgi - Hindan</td><td>Ghodawat</td></tr><tr><td>4</td><td>Tirupati -Kalaburgi - Tirupati</td><td>Ghodawat</td></tr></table><br>ವಿಮಾನಯಾನ ನಿರ್ವಾಹಕರೊಂದಿಗೆ ಕೇಂದ್ರ ಸರ್ಕಾರದೊಂದಿಗೆ ಮಾಡಿಕೊಂಡಿರುವ ಒಪ್ಪಂದದಂತೆ ವಿಮಾನಯಾನ ನಿರ್ವಾಹಕರು ವಿಮಾನ ಸೇವೆಯನ್ನು ಒದಗಿಸಿರುತ್ತವೆ.</td></tr>
</table>

<table>
<tr><td>(ಇ)</td><td>ವಿಮಾನಸೇವೆ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಎಷ್ಟು ಜನ ಪ್ರಯಾಣಿಕರು ಪ್ರಯಾಣಿಸಿದ್ದಾರೆ; (ವಾರ್ಷಿಕ ಅಂಕಿ ಅಂಶಗಳ ಮಾಹಿತಿ ಒದಗಿಸುವುದು)</td><td>ವಿಮಾನಯಾನ ಸೇವೆ ಪ್ರಾರಂಭವಾದ ದಿನದಿಂದ ಇಲ್ಲಿವರೆಗೆ ಪ್ರಯಾಣಿಸಿರುವ ಪ್ರಯಾಣಿಕರ ವರ್ಷವಾರು ವಿವರಗಳನ್ನು ಕೆಳಕಂಡ ತಃಖ್ತೆಯಲ್ಲಿ ವಿವರಿಸಿದೆ;
<table>
<tr><th>ಕ್ರ ಸಂ</th><th>ಆರ್ಥಿಕ ವರ್ಷ</th><th>ಪ್ರಯಾಣಿಕರ ಸಂಖ್ಯೆ</th></tr>
<tr><td>1.</td><td>2019-20</td><td>10,498</td></tr>
<tr><td>2.</td><td>2020-21</td><td>54,960</td></tr>
<tr><td>3.</td><td>2021-22</td><td>93,683</td></tr>
<tr><td>4.</td><td>2022-23</td><td>87,898</td></tr>
<tr><td>5.</td><td>2023-24</td><td>53,829</td></tr>
<tr><td>6.</td><td>2024-25</td><td>41,586</td></tr>
<tr><td>7.</td><td>2025-26</td><td>14,252</td></tr>
</table></td></tr>
<tr><td>(ಈ)</td><td>ಇತ್ತೀಚೆಗೆ ಕಲಬುರಗಿ ವಿಮಾನ ನಿಲ್ದಾಣಕ್ಕೆ ವಿಮಾನ ಸೇವೆ ನೀಡುತ್ತಿದ್ದ ಕಂಪನಿಗಳು ಸೇವೆಯನ್ನು ಸ್ಥಗಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಯಾವ ಕಾರಣಕ್ಕಾಗಿ ಸೇವೆಯನ್ನು ಸ್ಥಗಿತಗೊಳಿಸಿವೆ; ಇದರಿಂದಾಗಿ ಅವಲಂಬಿತ ಸಾರ್ವಜನಿಕರಿಗೆ ಸಮಸ್ಯೆ ಆಗುತ್ತಿದ್ದು ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;</td><td>ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಬೆಂಗಳೂರು-ಕಲಬುರಗಿ ಮಾರ್ಗದಲ್ಲಿ ಸೇವೆಯನ್ನು ಒದಗಿಸುತ್ತಿದ್ದ ಮೆ: Ghodawatಸಂಸ್ಥೆಯು ಈ ಮಾರ್ಗದಲ್ಲಿ ಪ್ರಯಾಣಿಸುವ ಪ್ರಯಾಣಿಕರ ಬೇಡಿಕೆಯ ಕುಸಿತದಿಂದ ಹಾಗೂ ವಾಣಿಜ್ಯ ಕಾರ್ಯಸಾಧ್ಯತೆಯಿಲ್ಲದ ಕಾರಣ, ದಿನಾಂಕ:15.10.2025ರಿಂದ ವಿಮಾನಯಾನ ಸೇವೆಯನ್ನು ಸ್ಥಗಿತಗೊಳಿಸಿದೆ.<br><br>ಬೆಂಗಳೂರು-ಕಲಬುರಗಿ ಮಾರ್ಗದಲ್ಲಿ ಪ್ರಸ್ತುತ ಕಾರ್ಯಚರಣೆ ಮಾಡುತ್ತಿರುವ ಸಂಸ್ಥೆಯ ವಿಮಾನಯಾನ ಸೇವೆಯನ್ನು ಮುಂದುವರೆಸಲು / ಪ್ರಾದೇಶಿಕ ಸಂಪರ್ಕ ಯೋಜನೆಯ ಅಡಿಯಲ್ಲಿ ಇತರ ಅರ್ಹ ನಿರ್ವಾಹಕರಿಂದ ಹೊಸದಾಗಿ ಬಿಡ್‌ಗಳನ್ನು ಆಹ್ವಾನಿಸುವಂತೆ ಕೇಂದ್ರ ಸರ್ಕಾರವನ್ನು ದಿನಾಂಕ:26.10.2025ರಂದು ಕೋರಲಾಗಿದೆ.</td></tr>
<tr><td>(ಉ)</td><td>ವಿಮಾನಸೇವೆ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಕಂಪನಿಗಳಿಗೆ ಹಾಗೂ ಇಲಾಖೆಗೆ ಬಂದ ವಾರ್ಷಿಕ ಆದಾಯ ಹಾಗೂ ಖರ್ಚು ಎಷ್ಟು;</td><td>ಕಲಬುರಗಿ ವಿಮಾನ ನಿಲ್ದಾಣದ ಕಾರ್ಯಚರಣೆ ಮತ್ತು ನಿರ್ವಾಹಣೆಯನ್ನು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ(AAI) ಕೈಗೊಳ್ಳುತ್ತಿದೆ. ಆದುದರಿಂದ, ವಿಮಾನ ನಿಲ್ದಾಣದ ಆದಾಯ ಮತ್ತು ಖರ್ಚುಗಳ ವಿವರಗಳು ಸರ್ಕಾರದಲ್ಲಿ ಲಭ್ಯವಿರುವುದಿಲ್ಲ.</td></tr>
<tr><td>(ಊ)</td><td>ಯಾವ ಕಾಲಮಿತಿಯಲ್ಲಿ ನಿಲ್ದಾಣಕ್ಕೆ ಪುನಃ ವಿಮಾನ ಸೇವೆಯನ್ನು ಪ್ರಾರಂಭಿಸಲಾಗುವುದು ಮತ್ತು ಯಾವ ಕಂಪನಿಗಳಿಗೆ ಟೆಂಡರನ್ನು ಕರೆಯಲು ಸರ್ಕಾರ ಪ್ರಸ್ತಾವನೆಯನ್ನು ಸಲ್ಲಿಸುತ್ತಿದೆ? (ಸಂಪೂರ್ಣ ವಿವರಣೆ ನೀಡುವುದು)</td><td>ಪ್ರಸ್ತುತವಿರುವ ವಿಮಾನಯಾನ ಕಾರ್ಯನಿರ್ವಾಹಕ ಸಂಸ್ಥೆಯನ್ನು ಬೆಂಗಳೂರು-ಕಲಬುರಗಿ ಮಾರ್ಗದಲ್ಲಿ ವಾಯುಯಾನ ಸೇವೆಯನ್ನು ಮುಂದುವರೆಸಲು / ಪ್ರಾದೇಶಿಕ ಸಂಪರ್ಕ ಯೋಜನೆಯ ಅಡಿಯಲ್ಲಿ ಇತರ ಅರ್ಹ ನಿರ್ವಾಹಕರಿಂದ ಹೊಸದಾಗಿ ಬಿಡ್‌ಗಳನ್ನು ಆಹ್ವಾನಿಸುವಂತೆ ದಿನಾಂಕ:26.10.2025ರಂದು ಕೇಂದ್ರ ಸರ್ಕಾರವನ್ನು ಕೋರಲಾಗಿದೆ.</td></tr>
</table>

ಸಂಖ್ಯೆ:ಮೂಅಇ 246 ರಾಅವಿ 2025

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ, ಸಚಿವರು